

ಹೀಗೆ ಸಮಗ್ರ ಭಾರತೀಯತೆಯನ್ನು ಅವನಂತೆ ಪ್ರತಿನಿಧಿಸಿದವರು ಇನ್ನೊಬ್ಬರು ಇಲ್ಲವೆನ್ನಬಹುದು. ದಿಟವಾದ ಅರ್ಥದಲ್ಲಿ ಅವನು ನಮ್ಮ ರಾಷ್ಟ್ರಕವಿ. ಭಾವೈಕ್ಯದ ಬಂಧುರದಲ್ಲಿರುವ ಪ್ರತಿಭೆಯು ರಸನಿರ್ಮಾಣದ ಮೂಲಕವೇ ರಾಷ್ಟ್ರನಿರ್ಮಾಣವನ್ನೂ ಮಾಡಬಲ್ಲದು ಎನ್ನುವುದನ್ನು ತೋರಿಸಿಕೊಟ್ಟ ಮಹಾಕವಿ ಅವನು. ಕಾಶ್ಮೀರದ ನೆಲದಲ್ಲಿ ನಿಂತೇ ಅವನು ಹಿಮಾಲಯವನ್ನು ಪೃಥ್ವಿಯ ಅಳತೆಗೋಲಾಗಿ ಕಂಡದ್ದು ಎನಿಸುತ್ತದೆ. ಹಿಮಾಲಯದ ಮುಂದೆ ನಿಂತಾಗ ಎಂಥವರಿಗೂ ವಿಸ್ಮಯಭಾವ ಮೂಡಲೇ ಬೇಕಲ್ಲ! ಆ ವಿಸ್ಮಯವೇ ಯೋಗಕ್ಕೆ ಬೇಕಾದ ಸಿದ್ಧತೆ. ('ವಿಸ್ಮಯೋ ಯೋಗಭೂಮಿಕಾ' – ಎನ್ನುವುದು ಕಾಶ್ಮೀರ ಶೈವದರ್ಶನದ ಸೂತ್ರವೇ ಹೌದು!) ಯೋಗದಲ್ಲಿ ಮಾಗುವ ಬುದ್ಧಿಯೇ ಪ್ರತಿಭೆ. ಜಡವಸ್ತುವಿನಲ್ಲಿಯೂ ಇರುವ ಚೇತನವನ್ನು ಕಾಣಬಲ್ಲ ಹೊಳಹೇ ಅಲ್ಲವೆ ಪ್ರತಿಭೆ? ಕಾಳಿದಾಸನು ಹಿಮಾಲಯವನ್ನೇ ಭಗವಂತನ ನೆಲೆಯಾಗಿ ಕಂಡವನು – 'ದೇವತಾತ್ಮ'. 'ಅಭಿಜ್ಞಾನ ಶಾಕುಂತಲ' ನಾಟಕವನ್ನಂತೂ ಕಾಶ್ಮೀರ ಪ್ರತ್ಯಭಿಜ್ಞಾದರ್ಶನದ ತತ್ತ್ವಾನುಸಂಧಾನದ ಬೆಳದಿಂಗಳಿನಲ್ಲಿಯೇ ಅವನು ಪ್ರಕಟಗೊಳಿಸಿದ್ದಾನೆ. ಕಾಶ್ಮೀರದ ಶೈವಸಿದ್ಧಾಂತ ಈ ಲೋಕದ ವಿವರಗಳನ್ನು ನಿರಾಕರಿಸಲಿಲ್ಲ; ಶಿವನ ರೂಪವೇ ಈ ವಿವರಗಳು, ಅವನ ಶಕ್ತಿಯ ಅಭಿವ್ಯಕ್ತಿಯೇ ಈ ವಿದ್ಯಮಾನಗಳು – ಎಂದು ಎತ್ತಿಹಿಡಿಯಿತು. ಕಾಳಿದಾಸನ ಕೃತಿಗಳನ್ನು ನೋಡಿದರೆ ಮೇಲ್ನೋಟಕ್ಕೆ ಅವನು ಶೃಂಗಾರಕವಿ ಎಂದು ತೋರುತ್ತಾನೆ. ಆದರೆ ಭೋಗದ ಭಿತ್ತಿಯಾಗಿ ಅವನು ತ್ಯಾಗವನ್ನೇ ಬಳಸಿಕೊಂಡವನು; ಅವನ ಆರಾಧ್ಯಮೂರ್ತಿ ಶಿವನು ಕೂಡ ತ್ಯಾಗ–ಭೋಗದ ಸಮನ್ವಯಕಾರನೇ ಅಲ್ಲವೆ? ಭೋಗದಲ್ಲಿ ಎಷ್ಟು ಸುಖವಿದ್ದರೂ, ಕಾಳಿದಾಸ ಕೊನೆಯದಾಗಿ ಪ್ರಾರ್ಥಿಸುವುದು ಹುಟ್ಟಿನ ನಿಲುಗಡೆ – ಮೋಕ್ಷವನ್ನೇ ಹೌದು.

ಶಿವನ ಕಾರುಣ್ಯವು ಕಾಶ್ಮೀರದಲ್ಲಿ ಅವತರಿಸಿದಾಗ ತೋರಿಕೊಂಡ ರೂಪವೇ ಅಭಿನವಗುಪ್ತ (ಶ್ರೀಕಂಠೇಶ್ವರಾವತಾರಃ ಪರಮಕಾರುಣ್ಯಯಾ ಪ್ರಾಪ್ತಕಾಶ್ಮೀರದೇಶಃ). ಈ ಹೆಸರೇ ನಮ್ಮಲ್ಲಿ ರಸಾವೇಶವನ್ನು ಮೂಡಿಸಬಲ್ಲದು. 'ಮಹಾಮಾಹೇಶ್ವರಾಚಾರ್ಯ' ಎಂದು ಕೀರ್ತಿತನಾದ ಅವನು ನಮ್ಮ ದೇಶ ಕಂಡಿರುವ ಮಹಾಪ್ರತಿಭಾಶಾಲಿ. ಕವಿಯಾಗಿ, ಶಾಸ್ತ್ರಕಾರನಾಗಿ, ವ್ಯಾಖ್ಯಾನಕಾರನಾಗಿ, ಸಾಧಕನಾಗಿ, ಗುರುವಾಗಿ, ಶಿಷ್ಯನಾಗಿ, ಸಿದ್ಧನಾಗಿ, ತಾಂತ್ರಿಕನಾಗಿ, ದಾರ್ಶನಿಕನಾಗಿ, ಯೋಗಿಯಾಗಿ ಅವನು ಭಾರತೀಯತೆಯ ಮೇಲೆ ಮುದ್ರೆಯೊತ್ತಿರುವ ಪರಿ ಅನನ್ಯವಾದುದು. ಇರುವ ಒಂದೇ ಗೌರೀಶಂಕರಶಿಖರವನ್ನು ಹತ್ತು ದಿಕ್ಕುಗಳಿಂದ ನೇರವಾಗಿ ಕಂಡು, ಅನಂತರ ತನ್ನ ಪ್ರತಿಭೆಯ ಕುಂಚದಿಂದ ಅದರ ಸ್ವಾರಸ್ಯವನ್ನು ಹತ್ತಾರು ನೆಲೆಗಳಿಂದ ಕಾಣಿಸಿದ ಕಲಾಯೋಗಿ ಅವನು. ಅವನ 'ಧ್ವನ್ಯಾಲೋಕಲೋಚನ' ಮತ್ತು 'ಅಭಿನವಭಾರತೀ' – ಈ ಎರಡು ಕೃತಿರತ್ನಗಳು ಭಾರತೀಯ ಕಲಾಪ್ರಪಂಚಕ್ಕೆ ಕಾಮಧೇನುವಿದ್ದಂತೆ. ನನಗೆ 'ಅಭಿನವಗುಪ್ತ' ಎಂದಕೂಡಲೇ ಅನುಭವಕ್ಕೆ ದಕ್ಕುವ ಅವನ ಪ್ರತಿಭೆಯ ಪ್ರತೀತಿ ಎಂದರೆ ರಸಪ್ರಸ್ಥಾನವನ್ನು ಅವನು ಗಟ್ಟಿಯಾಗಿ ನೆಲೆಗೊಳಿಸಿದ್ದು. ಇಡೀ ಭಾರತೀಯ ಕಲಾಮೀಮಾಂಸೆಗೇ ಅದು ಅಪೂರ್ವ ಕಾಂತಿಯನ್ನು ಒದಗಿಸಿತು. ಅವನು ನಡೆಸಿದ ಈ ರಸಕ್ರಾಂತಿಯನ್ನು ಕುರಿತು ತೀನಂಶ್ರೀ ಅವರ ಮಾತುಗಳು ಇಲ್ಲಿ ನೆನಪಾಗುತ್ತವೆ:

'ಸಂಸ್ಕೃತದ ಕಾವ್ಯನಾಟಕಮೀಮಾಂಸೆಯಲ್ಲಿ ರಸಪ್ರಾಶಸ್ತ್ಯವಾದವು ಕೇವಲ ಒಂದು ಪ್ರಸ್ಥಾನವಲ್ಲ; ಅದು ಎಲ್ಲ ಪ್ರಸ್ಥಾನಗಳ ಗಮ್ಯಸ್ಥಾನ. ಕಾವ್ಯವನ್ನು ಒಂದು ಗುಡಿಗೆ ಹೋಲಿಸಿದರೆ, ಅಲಂಕಾರಶಾಸ್ತ್ರದವರು ಅದರ ಹೊರಗೋಡೆಯನ್ನು ಸುತ್ತುವುದರಲ್ಲೇ ಕಾಲ ಕಳೆದರು; ರಸವನ್ನು ಕೂಡ ಆ ಹೊರಗೋಡೆಯ ಮೇಲೆ ಕೆತ್ತಿರುವ ಅನೇಕ ವಿಗ್ರಹಗಳಲ್ಲಿ ಒಂದಾಗಿ ಭಾವಿಸಿದ್ದರು. ಈ ಒಂದು ವಿಗ್ರಹವು ಮುಕ್ಕಾದರೂ ಮುರಿದು ಬಿದ್ದರೂ ಗುಡಿಗೆ ಯಾವ ಭಂಗವೂ ತಟ್ಟುವಂತೆ ಅವರಿಗೆ ತೋರಲಿಲ್ಲ. ರೀತಿಪ್ರಸ್ಥಾನದಲ್ಲಿ ರಸವು ಗುಡಿಯೊಳಕ್ಕೆ ಬಂದಿತು; ಕಾವ್ಯಕ್ಕೆ ನಿಯತವಾದ ಅಂಗವಾಯಿತು; ಆದರೆ ಪ್ರಾಮುಖ್ಯವನ್ನು ಇನ್ನೂ ಪಡೆಯಲಿಲ್ಲ. ಅದನ್ನು ಇಲ್ಲಿ ಗರ್ಭಗುಡಿಯ ದ್ವಾರಪಾಲಕನಿಗೆ ಹೋಲಿಸಬಹುದೋ ಏನೋ? ಧ್ವನಿಕಾರನು ಬಂದು ರಸದ ಮಹತ್ವವನ್ನರಿತು ಒಳಪೀಠದ ಮೇಲೆ ನಿಲ್ಲಿಸಿದಾಗ ಇದೇ ಕಾವ್ಯಮಂದಿರದ ಅಧಿದೈವವೆಂದು ಗೊತ್ತಾಯಿತು. ಆದರೂ, ಈ ವಿಗ್ರಹಕ್ಕೆ ಪ್ರಾಣಪ್ರತಿಷ್ಠೆ ಮಾಡಿದವನು ಅಭಿನವಗುಪ್ತ.'

ಅಭಿನವಗುಪ್ತನ ಹಲವು ಪ್ರಮುಖ ಕೊಡುಗೆಗಳಲ್ಲಿ ಒಂದು ಶಾಂತರಸದ ಪ್ರತಿಪಾದನೆ. ಪರಂಪರೆಯಲ್ಲಿ ರಸಗಳ ಸಂಖ್ಯೆಯನ್ನು ಎಂಟು ಎಂದು ಒಕ್ಕಣಿಸಲಾಗಿತ್ತು. ಇದಕ್ಕೆ ಇನ್ನೊಂದನ್ನು ಸೇರಿಸಿದವನು ಅವನು. ಹೀಗೆ ಸೇರಿಸಿದ ರಸವೇ ಶಾಂತರಸ. ಅವನು ಎಂಟು ರಸಗಳಿಗೆ ಇನ್ನೊಂದು ರಸವನ್ನು ಸೇರಿಸಿ ಅವುಗಳ ಸಂಖ್ಯೆಯನ್ನು ಒಂಬತ್ತಕ್ಕೆ ಏರಿಸಿದ ಎನ್ನುವುದಕ್ಕಿಂತಲೂ, ಎಲ್ಲ ರಸಗಳ ಮೌಲ್ಯವನ್ನೂ ಒಂದೇ ರಸವಾಗಿ ಕಾಣಿಸಿದ ಎಂದರೆ ಸರಿಯಾದೀತೇನೋ! ಏಕೆಂದರೆ 'ಶಾಂತವೂ ರಸವಾದೀತೆ?' ಎಂಬ ಪ್ರಶ್ನೆ ಎದ್ದಾಗ, 'ಶಾಂತ ಒಂಬತ್ತನೆಯ ರಸವಾಗುವುದಿರಲಿ, ವಾಸ್ತವವಾಗಿ ಇರುವುದು ಶಾಂತರಸವೊಂದೇ' ಎಂದೇ ಪ್ರತಿಪಾದಿಸಿಬಿಟ್ಟ ಅವನು! ಮನುಷ್ಯನ ಮೂಲಭೂತ ಸ್ವಭಾವ ಎಂದರೆ ನೆಮ್ಮದಿ, ಶಾಂತಿ; ಅದೇ ಆನಂದ. ಅದರಿಂದ ಹೊರಚಿಮ್ಮಿದ ಭಾವಗಳು ಹಲವು